**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027. ಭಾರತ
ದೂರವಾಣಿ : 080-22221321 / 22221325
ವೆಬ್–ಸೈಟ್ : www.ksrtc.karnataka.gov.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.karnataka.gov.in

**ಸಂ.ಕರಾಸ:ಕೇಕ:ಆಡಳಿತ:ಎಎಆರ್ ಸೆಲ್:** 854 **:2021-22** **ದಿನಾಂಕ:** 21 **-03-2022**

## ಸುತ್ತೋಲೆ ಸಂಖ್ಯೆ: 1703

**ವಿಷಯ:** ಅಧಿಕಾರಿಗಳ ಆಸ್ತಿ ಮತ್ತು ಋಣಭಾರ ಘೋಷಣೆಯನ್ನು 'ಆನ್‌ಲೈನ್' ಮೂಲಕ ಸಲ್ಲಿಸುವ ಕುರಿತು.

**ಉಲ್ಲೇಖ:** 1.ಸುತ್ತೋಲೆ ಸಂಖ್ಯೆ: 1290 ದಿನಾಂಕ: 19.02.2003.
2.ಸುತ್ತೋಲೆ ಸಂಖ್ಯೆ: 1418 ದಿನಾಂಕ: 06.05.2010.
3.ಸುತ್ತೋಲೆ ಸಂಖ್ಯೆ: 1484 ದಿನಾಂಕ: 18.03.2013.

- - - -

ಕ.ರಾ.ರ.ಸಾ.ಸಂಸ್ಥೆ ನೌಕರರ (ಶಿಸ್ತು ಮತ್ತು ನಡತೆ) ನಿಯಮಾವಳಿ, 1971ರ ನಿಯಮಾವಳಿ-14ರ ಮೇರೆಗೆ ಪ್ರತಿಯೊಬ್ಬ ಅಧಿಕಾರಿ/ನೌಕರರು ಆರ್ಥಿಕ ವರ್ಷಾಂತ್ಯದಲ್ಲಿ ತಾವು ಹಾಗೂ ಕುಟುಂಬದ ಸದಸ್ಯರು ಹೊಂದಿರುವ ಸ್ಥಿರ/ಚರಾಸ್ತಿಗಳ ವಿವರಗಳನ್ನು ನಿಗಮಕ್ಕೆ ಸಲ್ಲಿಸಬೇಕಾಗಿದ್ದು, ಈ ಸಂಬಂಧ ಉಲ್ಲೇಖಿತ ಸುತ್ತೋಲೆಗಳಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಅಧಿಕಾರಿಗಳ ಆಸ್ತಿ ಮತ್ತು ಋಣಭಾರ ಘೋಷಣೆಯನ್ನು ಸಕಾಲದಲ್ಲಿ ಸಲ್ಲಿಸಲು ಅನುಕೂಲವಾಗುವಂತೆ ಹಾಗೂ ಕಾಗದರಹಿತಗೊಳಿಸುವ ದೃಷ್ಟಿಯಿಂದ ದಿನಾಂಕ:01.04.2022 ರಿಂದ ಜಾರಿಗೆ ಬರುವಂತೆ, 2021-22ನೇ ಸಾಲಿನ ಆಸ್ತಿ ಮತ್ತು ಋಣಭಾರ ಘೋಷಣೆ ಆನ್‌ಲೈನ್ ಮೂಲಕ ಸಲ್ಲಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಈಗಾಗಲೇ ಕಾರ್ಯನಿರ್ವಹಣಾ ಸಮೀಕ್ಷಾ ವರದಿ ಸಲ್ಲಿಸಲು ರಚಿಸಿರುವ ವೆಬ್‌ಸೈಟ್ "par.ksrtcapps.in" ನಲ್ಲಿ ಲಾಗ್‌ಇನ್ ಐಡಿಯನ್ನು ಎಲ್ಲಾ ಅಧಿಕಾರಿಗಳಿಗೆ ನೀಡಲಾಗಿದ್ದು, ಸದರಿ ಲಾಗ್‌ಇನ್ ಐಡಿಯಲ್ಲಿ ಆಸ್ತಿ ಮತ್ತು ಋಣಭಾರ ಘೋಷಣೆಯ ಲಿಂಕ್ ಲಭ್ಯವಿದ್ದು, ಸದರಿ ಲಿಂಕ್ ಬಳಸಿ ಆಸ್ತಿ ಮತ್ತು ಋಣಭಾರ ಘೋಷಣೆ ಸಲ್ಲಿಸುವುದು. (ಈ ಕುರಿತು ಕೈಪಿಡಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುತ್ತದೆ)

ಇನ್ನು ಮುಂದೆ ಅಧಿಕಾರಿಗಳು ಪ್ರತಿ ಆರ್ಥಿಕ ವರ್ಷದಲ್ಲಿ ಆಸ್ತಿ ಮತ್ತು ಋಣಭಾರ ಘೋಷಣೆಯನ್ನು ಆನ್‌ಲೈನ್ ತಂತ್ರಾಂಶದ ಮೂಲಕ ಕಡ್ಡಾಯವಾಗಿ ಏಪ್ರಿಲ್-30ರೊಳಗೆ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ಅಧಿಕಾರಿಗಳು ಮೇಲಿನ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಉಳಿದಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)**
**ವ್ಯವಸ್ಥಾಪಕ ನಿರ್ದೇಶಕರು**

**ಅಡಕ:** ಮೇಲಿನಂತೆ

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಕಕರಸಾ ನಿಗಮ ರವರಿಗೆ.
3. ನಿರ್ದೇಶಕರು (ಸಿ:ಜಾ), ಕರಾರಸಾ ನಿಗಮ, ರವರಿಗೆ.

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಕಕರಸಾ ನಿಗಮ ರವರಿಗೆ.
6. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ)/(ನೇಮಕ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
7. ಮುಖ್ಯ ಭದ್ರತಾ ಮತ್ತು ಜಾಗ್ರತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ರವರಿಗೆ ವರದಿ ಸಲ್ಲಿಸುವುದು.
8. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
9. ಪ್ರಧಾನ ಕಛೇರಿ ಪತ್ರ ಕಡತ.

# ಕೈಪಿಡಿ

## ಅಧಿಕಾರಿಗಳ ಆಸ್ತಿ ಮತ್ತು ಋಣಭಾರ ಘೋಷಣೆಯನ್ನು 'ಆನ್ ಲೈನ್ ಮೂಲಕ' ಸಲ್ಲಿಸುವ ಕುರಿತು

ಕಾರ್ಯನಿರ್ವಹಣಾ ಸಮೀಕ್ಷಾ ವರದಿ ಸಲ್ಲಿಸಲು ಇರುವ ವೆಬ್ ಸೈಟ್ par.ksrtcapps.in ಗೆ ಲಾಗ್‌ಇನ್ ಆಗಲು ಲಾಗ್‌ಇನ್ ಐಡಿಯನ್ನು ಅಧಿಕಾರಿಗಳಿಗೆ ನೀಡಲಾಗಿದ್ದು, ಸದರಿ ಐಡಿಯನ್ನು ಬಳಸಿಕೊಂಡು ಅದರಲ್ಲಿ ಆಸ್ತಿ ಮತ್ತು ಋಣಭಾರ ಘೋಷಣೆಯ ಕುರಿತು ಇರುವ Link ಬಳಸಿ ಈ ಕೆಳಕಂಡ ಹಂತಗಳಂತೆ ಆಸ್ತಿ ಮತ್ತು ಋಣಭಾರ ವಿವರಗಳನ್ನು ಭರ್ತಿ ಮಾಡಬಹುದಾಗಿದೆ.

1) User Name ಹಾಗೂ Password ನಲ್ಲಿ ಅಧಿಕಾರಿಗಳು ತಮ್ಮ ಭವಿಷ್ಯ ನಿಧಿ ಸಂಖ್ಯೆ ಮತ್ತು ಗುಪ್ತಪದ ನಮೂದಿಸಿ, Login ಆಗುವುದು.




2) Login ಆದ ನಂತರ Menu bar ನಲ್ಲಿ "Assets & Liabilities Format 1(Word Document) " ಹಾಗೂ Assets & Liabilities Format 2 (Salary Details) click ಮಾಡುವುದು.



3) Assets & Liabilities Format-1 (Word Document) ಹಾಗೂ Assets & Liabilities Format 2 (Salary Details) Click ಮಾಡಿದಾಗ Format-1 & 2 Download ಆಗುತ್ತದೆ.




4) Download ಆದ ನಮೂನೆಗಳಲ್ಲಿ ವಿವರಗಳನ್ನು ಭರ್ತಿಮಾಡಿ ಅವುಗಳನ್ನು ಮುದ್ರಿಸಿ (Print) ನಿಗದಿತ ಸ್ಥಳದಲ್ಲಿ ಸಹಿ ಮಾಡುವುದು. ಸಹಿ ಮಾಡಿದ ನಂತರ ಎರಡೂ ನಮೂನೆಗಳನ್ನು ಸೇರಿಸಿ ಒಂದೇ **PDF** ನಲ್ಲಿ **Upload** ಮಾಡುವುದು. **Upload** ಮಾಡಿದ ಬಗ್ಗೆ ಖಾತರಿಪಡಿಸಿಕೊಳ್ಳುವುದು.




5) ಆಸ್ತಿ ಮತ್ತು ಋಣಭಾರ ಘೋಷಣೆಯ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.